156 ನೇ೬ = (132)
4RR
010126

**ಕರ್ನಾಟಕ ವಿಧಾನ ಪರಿಷತ್ ಮಾನ್ಯ ಸದಸ್ಯರಾದ ಶ್ರೀ ಡಿ.ಎಸ್. ಅರುಣ ಇವರು ನಿಯಮ-72ರಡಿ ಮಂಡಿಸಿರುವ ಸೂಚನೆಗೆ ಸರ್ಕಾರದ ಹೇಳಿಕೆ**

**ಸೂಚನೆ:-**

ಬೆಂಗಳೂರು ಉತ್ತರ ತಾಲ್ಲೂಕು, ಯಶವಂತಪುರ ಹೋಬಳಿ, ಲಗ್ಗೆರೆ ಗ್ರಾಮದ ಸ.ನಂ. 119 ಮತ್ತು 120 ರಲ್ಲಿ ಉಚಿತ ನಿವೇಶನದ ಮಾಲೀಕತ್ವದ ದಾಖಲೆಗಳನ್ನು ನೀಡುವ ಬಗ್ಗೆ ಮಾನ್ಯ ಕಂದಾಯ ಸಚಿವರ ಗಮನ ಸೆಳೆಯ ಬಯಸುತ್ತೇನೆ.

******

**ಹೇಳಿಕೆ:**

ಬೆಂಗಳೂರು ನಗರ ಜಿಲ್ಲೆ, ಯಶವಂತಪುರ ಹೋಬಳಿ. ಲಗ್ಗೆರೆ ಗ್ರಾಮದ ಸರ್ವೆ ನಂ. 119 ಮತ್ತು 120ರಲ್ಲಿ 1972-73ನೇ ಸಾಲಿನಲ್ಲಿ ಮಾನ್ಯ ಪ್ರಧಾನ ಮಂತ್ರಿಗಳ 20 ಅಂಶಗಳ ಕಾರ್ಯ ಯೋಜನೆಗಳಡಿಯಲ್ಲಿ ಬಡವರಿಗಾಗಿ ಒಟ್ಟು 1078 ನಿವೇಶನಗಳನ್ನು ಸರ್ಕಾರದಿಂದ ಉಚಿತವಾಗಿ ನೀಡಿದ್ದು, ಸದರಿ ನಿವೇಶನಗಳಿಗೆ ಸಂಬಂದಪಟ್ಟಂತೆ ಕರ್ನಾಟಕ ವಿಧಾನಸಭೆಯ ಅರ್ಜಿಗಳ ಸಮಿತಿಯಲ್ಲಿ ದಿನಾಂಕ: 09-11-2017 ರಂದು ಬೆಂಗಳೂರು ನಗರ ಜಿಲ್ಲೆ, ಯಶವಂತಪುರ ಹೋಬಳಿ. ಲಗ್ಗೆರೆ ಗ್ರಾಮದ(ರಾಜಗೋಪಾಲನಗರ) ಸರ್ವೆ ನಂ. 119 ಮತ್ತು 120ರಲ್ಲಿ 1972-73ನೇ ಸಾಲಿನಲ್ಲಿ ಮಾನ್ಯ ಪ್ರಧಾನ ಮಂತ್ರಿಗಳ 20 ಅಂಶಗಳ ಕಾರ್ಯ ಯೋಜನೆಗಳಡಿಯಲ್ಲಿ ಬಡವರಿಗಾಗಿ ಒಟ್ಟು 1078 ನಿವೇಶನಗಳನ್ನು ಸರ್ಕಾರದಿಂದ ಉಚಿತವಾಗಿ ನೀಡಿದ್ದು, ಸದರಿ ನಿವೇಶನಗಳನ್ನು ನೀಡಿ 42 ವರ್ಷಗಳು ಗತಿಸಿರುವುದರಿಂದ ಇತ್ತೀಚೆಗೆ ಕಂದಾಯ ಇಲಾಖೆಯು ಸಮೀಕ್ಷೆ ನಡೆಸಿ, ಸದರಿ ನಿವೇಶನಗಳಲ್ಲಿ ವಾಸವಾಗಿರುವ ಪಲಾನುಭವಿಗಳನ್ನು ಗುರುತಿಸಿರುತ್ತಾರೆ. ಸದರಿ ಫಲಾನುಭವಿಗಳಿಗೆ ಸರ್ಕಾರ ಶುಲ್ಕ ನಿಗದಿ ಮಾಡಿ ಸದರಿ ಶುಲ್ಕವನ್ನು ಪಾವತಿಸಿಕೊಂಡು ಮಾಲೀಕತ್ವದ ದಾಖಲೆಯನ್ನು ನೀಡಲು ಸಮಿತಿಯು ನಿರ್ಣಯಿಸಿರುತ್ತದೆ.

ದಿನಾಂಕ:20-12-2017 ರಂದು ಬೆಂಗಳೂರು ಉತ್ತರ ತಾಲ್ಲೂಕು, ಯಶವಂತಪುರ ಹೋಬಳಿ, ಲಗ್ಗೆರೆ ಗ್ರಾಮದ ಸ.ನಂ.119 ಮತ್ತು 120 ರಲ್ಲಿ 1972-73 ನೇ ಸಾಲಿನಲ್ಲಿ ಮಾನ್ಯ ಪ್ರಧಾನಮಂತ್ರಿಗಳ 20 ಅಂಶಗಳ ಕಾರ್ಯಯೋಜನೆಗಳಡಿಯಲ್ಲಿ ಬಡವರಿಗಾಗಿ ಒಟ್ಟು 1078 ನಿವೇಶನಗಳನ್ನು ಸರ್ಕಾರದಿಂದ ಉಚಿತವಾಗಿ ನೀಡಿದ್ದು, ಸದರಿ ನಿವೇಶನಗಳನ್ನು ನೀಡಿ 42 ವರ್ಷಗಳು ಗತಿಸಿರುವುದರಿಂದ ಇತ್ತೀಚೆಗೆ ಕಂದಾಯ ಇಲಾಖೆಯು ಸಮೀಕ್ಷೆ ನಡೆಸಿ ಸದರಿ ನಿವೇಶನಗಳಲ್ಲಿ ವಾಸವಾಗಿರುವ ಫಲಾನುಭವಿಗಳನ್ನು ಗುರುತಿಸಿರುತ್ತಾರೆ. ಸದರಿ ಫಲಾನುಭವಿಗಳಿಗೆ ಸರ್ಕಾರ ಶುಲ್ಕ ನಿಗದಿ ಮಾಡಿ ಸದರಿ ಶುಲ್ಕವನ್ನು ಪಾವತಿಸಿಕೊಂಡು ಮಾಲೀಕತ್ವದ ದಾಖಲೆಯನ್ನು ನೀಡಲು ವಿಧಾನಸಭೆಯ ಅರ್ಜಿ ಸಮಿತಿ ನಿರ್ಣಯಿಸಿರುತ್ತದೆ. ಆದರೆ ಸದರಿ ಫಲಾನುಭವಿಗಳಿಗೆ ಸರ್ಕಾರವು ಯಾವ ರೀತಿಯಲ್ಲಿ ಶುಲ್ಕವನ್ನು ಪಾವತಿಸಿಕೊಳ್ಳಬೇಕು ಎಂದು ಹಾಗೂ ಯಾರು ಮಾಲೀಕತ್ವದ ಹಕ್ಕುಪತ್ರಗಳನ್ನು ನೀಡಬೇಕೆಂಬ ಸ್ಪಷ್ಟ ನಿರ್ದೇಶನ ನೀಡಿರುವುದಿಲ್ಲ.

ಮುಂದುವರೆದು ಸರ್ಕಾರದ ಪತ್ರ ಸಂಖ್ಯೆ:ಕಂಇ02ಎಲ್ ಜಿಬಿ 2022 ದಿನಾಂಕ: 06-07-2022 ರ ಪತ್ರದಂತೆ ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು ಉತ್ತರ ತಾಲ್ಲೂಕು, ಯಶವಂತಪುರ ಹೋಬಳಿ, ಲಗ್ಗೆರೆ ಗ್ರಾಮದ ಸರ್ವೇ ನಂ. 119 ಮತ್ತು 120 ರಲ್ಲಿ ನೀಡಿರುವ ಉಚಿತ ನಿವೇಶನಗಳಿಗೆ ಹಕ್ಕುಪತ್ರ/ಮಾಲೀಕತ್ವದ ದಾಖಲೆಗಳನ್ನು ನೀಡುವ ಬಗ್ಗೆ ಹಾಗೂ ಪ್ರಸ್ತಾಪಿತ ಪ್ರದೇಶದ ಹಾಲಿ ಸ್ಥಿತಿಯನ್ನು ಪರಿಶೀಲಿಸಿ ವರದಿ ಸಲ್ಲಿಸುವಂತೆ ಸೂಚಿಸಿರುವಂತೆ ಸಂಬಂಧಪಟ್ಟ ಉಪತಹಶೀಲ್ದಾರ್ ಹಾಗೂ ರಾಜಸ್ವ ನಿರೀಕ್ಷಕರವರಿಂದ ವರದಿ ಪಡೆಯಲಾಗಿದ್ದು, ಸದರಿಯವರ ವರದಿಯಲ್ಲಿ ಬೆಂಗಳೂರು ಉತ್ತರ ತಾಲ್ಲೂಕು, ಯಶವಂತಪುರ ಹೋಬಳಿ, ಲಗ್ಗೆರೆ ಗ್ರಾಮದ ಸ.ನಂ. 119/120 ರಲ್ಲಿ ನೀಡಿರುವ ಉಚಿತ ನಿವೇಶನಗಳಿಗೆ ಹಕ್ಕುಪತ್ರ/ಮಾಲೀಕತ್ವದ ದಾಖಲೆಗಳನ್ನು ಒದಗಿಸುವ ಬಗ್ಗೆ ವರದಿ ಸಲ್ಲಿಸಲು ಸೂಚಿಸಲಾಗಿರುತ್ತದೆ. ಅದರಂತೆ ಪರಿಶೀಲಿಸಲಾಗಿ ಸ.ನಂ. 119 ರಲ್ಲಿ ಒಟ್ಟು 36-18 ಎ/ಗು ಹಾಗೂ 120 ರಲ್ಲಿ 41-10 ಎ/ಗು ಜಮೀನಿದ್ದು, ಮೂಲತಃ ಸರ್ಕಾರಿ ಹುಲ್ಲುಬನಿ ಜಮೀನಾಗಿರುತ್ತದೆ. ಸದರಿ ಜಮೀನು ಬಿಬಿಎಂಪಿ ವ್ಯಾಪ್ತಿಯಲ್ಲಿದ್ದು, ವಾರ್ಡ್ ನಂ. 41, 69 ಮತ್ತು 70 ಎಂದು ವಿಂಗಡಣೆಗಳಾಗಿರುತ್ತದೆ. ಸರ್ಕಾರದ ಅಧಿಸೂಚನೆ ಸಂಖ್ಯೆ: ಆರ್.ಡಿ.345 ಎಲ್ ಜಿಬಿ2012 ದಿ:28-08-2015 ರಂತೆ ಕರ್ನಾಟಕ ಭೂ ಕಂದಾಯ ಅಧಿನಿಯಮ 1964 ರ ಕಲಂ 94 ಸಿಸಿ ರಡಿ ಅರ್ಜಿ ಸಲ್ಲಿಸಿದ್ದು, ಸ.ನಂ. 119 ಮತ್ತು 120 ಎಂದು ನಮೂದಿಸಿ 1541 ಅರ್ಜಿಗಳು ಸ್ವೀಕೃತವಾಗಿರುತ್ತದೆ. ಸದರಿ ಅರ್ಜಿಗಳ ಕುರಿತು ಪರಿಶೀಲಿಸಿ ಈಗಾಗಲೇ ವರದಿ ಸಲ್ಲಿಸಲಾಗಿದ್ದು, ಈ ಪೈಕಿ ಪ್ರಸ್ತಾಪಿತ ಜಮೀನಿನಲ್ಲಿರುವ ಕೆಲವು ಅರ್ಜಿದಾರರುಗಳು ಕ್ರಯ, ಭೋಗ್ಯ, ಆಧಾರ, ಜಿ.ಪಿ.ಎ ಹಾಗೂ ನಿವೇಶನಗಳನ್ನು ಮಾಡಿರುವುದು ಕಂಡುಬಂದಿದ್ದು ಕೆಲವು ಮನೆಗಳು 2 ರಿಂದ 4 ಅಂತಸ್ತಿನಲ್ಲಿ ನಿರ್ಮಾಣವಾಗಿರುತ್ತದೆ ಮತ್ತು ಕೆಲವು ವಾಣಿಜ್ಯ ಮಳಿಗೆ ಹಾಗೂ ಕಾರ್ಖಾನೆಗಳಾಗಿರುತ್ತದೆ, ಹಾಗೂ ಪ್ರಸ್ತಾಪಿತ ಪ್ರದೇಶವು ಸಂಪೂರ್ಣ ಅಭಿವೃದ್ಧಿ ಹೊಂದಿದ್ದು, ಬಿಬಿಎಂಪಿ ವ್ಯಾಪ್ತಿಯಲ್ಲಿರುತ್ತದೆ, ಹಾಗೂ ಈ ಹಿಂದೆ ವರದಿ ಸಲ್ಲಿಸಿರುವಂತೆ ಬಿಬಿಎಂಪಿ ವತಿಯಿಂದ 1277 ಕಟ್ಟಡಗಳಿಗೆ ಸ್ವತ್ತಿನ ಸಂಖ್ಯೆ ನೀಡಲಾಗಿರುತ್ತದೆ, ಸದರಿ ಪ್ರದೇಶದಲ್ಲಿ ಸುಮಾರು 7000 ಕ್ಕೂ ಹೆಚ್ಚು ಮನೆ, ನಿವೇಶನ, ವಾಣಿಜ್ಯ ಕಟ್ಟಡ, ದೇವಸ್ಥಾನ, ಸರ್ಕಾರಿ ರಸ್ತೆ, ಶಾಲಾ ಕಟ್ಟಡ ಹಾಗೂ ಇತರೆ ಉದ್ದೇಶಗಳಿಗೆ ಉಪಯೋಗವಾಗುತ್ತಿರುತ್ತದೆ. ಬಿಬಿಎಂಪಿ, ಬೆಸ್ಕಾಂ, ಕೊಳಚೆ ನಿರ್ಮೂಲನಾ ಮಂಡಳಿ ಹಾಗೂ ಇತರೆ ಸರ್ಕಾರಿ ಸ್ವಾಮ್ಯದ ಇಲಾಖೆಗಳಿಂದ ಮೂಲಭೂತ ಸೌಕರ್ಯಗಳಾದ ರಸ್ತೆ, ಕುಡಿಯುವ ನೀರು ಹಾಗೂ ಇತರೆ ಸೌಲಭ್ಯಗಳನ್ನು ನೀಡಲಾಗಿರುತ್ತದೆ. ಹಾಲಿ ಲಗ್ಗೆರೆ.ಗ್ರಾಮದ ಸ.ನಂ. 119 ಮತ್ತು 120 ರ ಕುರಿತು ಈ ಹಿಂದೆ ಸಕ್ರಮಕ್ಕಾಗಿ ಅರ್ಜಿ ಸಲ್ಲಿಸಿದ್ದ 1078 ಫಲಾನುಭವಿಗಳಿಗೆ ನೀಡಿದ್ದ ಹಕ್ಕುಪತ್ರಗಳನ್ನು ಹಿಂಪಡೆದು ಸದರಿ ಹಕ್ಕುಪತ್ರಗಳ ನೈಜತೆ ಕುರಿತು 1987 ನೇ ಸಾಲಿನಲ್ಲಿ ಸಿ.ಓ.ಡಿ ಕಛೇರಿಯಿಂದ ಪರಿಶೀಲನಾ ಕಾರ್ಯ ಕೈಗೊಂಡಿರುವುದು ಕಂಡುಬರುತ್ತದೆ. ಅದರಂತೆ ಕರ್ನಾಟಕ ಭೂಕಂದಾಯ ಅಧಿನಿಯಮ 1964 ರ ಕಲಂ 94ಸಿ ರಡಿ ಅರ್ಜಿ ಸಲ್ಲಿಸಿರುವ ಕುರಿತು ಮಾನ್ಯ ಸರ್ಕಾರದ ಅರ್ಜಿ ಸಮಿತಿ ಸಂಖ್ಯೆ: 122/2015 ರಂತೆ ವಿಚಾರಣೆ ಹಂತದಲ್ಲಿದ್ದು, ಅಂತಿಮ ಆದೇಶವಾಗಿರುವುದಿಲ್ಲ, ಮುಂದುವರೆದು ಈ ಪೈಕಿ 94 ಸಿ ರಡಿ ಅರ್ಜಿ ಸಲ್ಲಿಸಿರುವ ಕೆಲವು ಅರ್ಜಿದಾರರುಗಳೇ 94ಸಿಸಿ ರಡಿ ಅರ್ಜಿ ಸಲ್ಲಿಸಿರುವುದು ಕೂಡ ಕಂಡುಬರುತ್ತದೆ, ಆದ್ದರಿಂದ ಪ್ರಸ್ತಾಪಿತ ವಿಚಾರದ ಕುರಿತು ಸೂಕ್ತ ಕ್ರಮಕೈಗೊಳ್ಳಲು ವಿಳಂಬವಾಗಿರುತ್ತದೆ, ಹಾಗೂ ಸದರಿ ಪ್ರದೇಶದಲ್ಲಿ ಬಡತನ ರೇಖೆಗಿಂತ ಕೆಳಗೆ ಇರುವ ಹಿಂದುಳಿದ ಜನಾಂಗದವರು ಹಾಗೂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ

ಸೇರಿದ ಜನಾಂಗದವರು ಹೆಚ್ಚಾಗಿ ವಾಸವಿರುತ್ತಾರೆ. ಹಾಲಿ ಸದರಿ 94 ಸಿಸಿ ರಡಿ ಸಲ್ಲಿಸಿರುವ ಅರ್ಜಿಗಳನ್ನು ಪರಿಶೀಲಿಸಿ 309 ಅರ್ಜಿಗಳಿಗೆ ತಾತ್ಕಾಲಿಕ ಆದೇಶ ನೀಡಲು ಕ್ರಮವಹಿಸಲಾಗಿತ್ತದೆ ಮತ್ತು ಉಳಿಕೆ ಅರ್ಜಿಗಳು ಮರುಪರಿಶೀಲನಾ ಹಂತದಲ್ಲಿದ್ದು ಸ.ನಂ. 119 ಮತ್ತು 120 ರ ಗಡಿ ಗುರುತಿಸುವ ಅಳತೆ ಕಾರ್ಯವು ಸಹ ಚಾಲ್ತಿಯಲ್ಲಿರುತ್ತದೆಂದು ವರದಿಸಿರುತ್ತಾರೆ ಹಾಗೂ ದಿ: 29-12-2016 ರ ಪತ್ರದಲ್ಲಿ ಈಗಾಗಲೇ ಈ ಹಿಂದೆ 1972-73 ನೇ ಸಾಲಿನಲ್ಲಿ 1078 ಫಲಾನುಭವಿಗಳಿಗೆ ಹಕ್ಕುಪತ್ರ ನೀಡಿದ್ದು ಇದರ ಪೈಕಿ ಮೂಲ ಹಕ್ಕುಪತ್ರ ಪಡೆದಿರುವ ಫಲಾನುಭವಿಗಳು ಹಾಗೂ ಇವರ ಕುಟುಂಬದ ವಂಶಸ್ಥರು ಸುಮಾರು 71 ಫಲಾನುಭವಿಗಳು ಹಕ್ಕು ಪತ್ರ ನೀಡಿರುವಂತೆ ವಾಸವಾಗಿರುತ್ತಾರೆ ಹಾಗೂ ಈ ಹಿಂದೆ ಹಕ್ಕುಪತ್ರ ಪಡೆದಿರುವ ಸುಮಾರು 1007 ಫಲಾನುಭವಿಗಳು ಬೇರೆಯವರಿಗೆ ಕ್ರಯ, ಭೋಗ್ಯ,ಆಧಾರ, ಜಿ.ಪಿ.ಎ ಯಂತೆ ನಿವೇಶನ ಮನೆಗಳು ವರ್ಗಾವಣೆ ಮಾಡಿರುವುದು ಸ್ಥಳ ಪರಿಶೀಲನೆ ಮತ್ತು ಫಲಾನುಭವಿಗಳು ನೀಡಿರುವ ದಾಖಲೆಗಳಿಂದ ಕಂಡುಬಂದಿರುತ್ತದೆ.

ಮುಂದುವರೆದು ಸರ್ಕಾರದ ಪತ್ರದಲ್ಲಿ ಬೆಂಗಳೂರು ಉತ್ತರ ತಾಲ್ಲೂಕು ಯಶವಂತಪುರ ಹೋಬಳಿ ಲಗ್ಗೆರೆ ಗ್ರಾಮ ಸರ್ವೆ ನಂ.119 ಮತ್ತು 120 ರಲ್ಲಿ ಹಾಲಿ ಅನುಭವದಲ್ಲಿರುವ ಅರ್ಹ ಫಲಾನುಭವಿಗಳ ಪಟ್ಟಿಯನ್ನು ಸಂಬಂಧಿಸಿದ ತಹಶೀಲ್ದಾರ್ ರವರ ದೃಢೀಕರಣದೊಂದಿಗೆ ಹಾಗೂ ವರದಿಯಲ್ಲಿ ಪ್ರಸ್ತಾಪಿತ ಜಮೀನಿನಲ್ಲಿ ನಿವೇಶನಗಳನ್ನು ವಿಂಗಡಿಸಿರುವ ಬಗ್ಗೆ ಮತ್ತು ಹಕ್ಕುಪತ್ರಗಳ ನೈಜತೆಯ ಬಗ್ಗೆ ವಿಚಾರಣೆ ನಡೆಸಲು ಸಿ.ಒ.ಡಿ ಗೆ ವಹಿಸಲಾಗಿರುವುದಾಗಿ ಪ್ರಸ್ತಾಪಿಸಲಾಗಿದ್ದು, ಈ ಪ್ರಕರಣದಲ್ಲಿ ಸಿ.ಒ.ಡಿ ಯ ಇತ್ತೀಚಿನ/ಅಂತಿಮ ವರದಿಯೊಂದಿಗೆ ಪ್ರಸ್ತಾವನೆ ಕುರಿತು ಸ್ಪಷ್ಟ ಅಭಿಪ್ರಾಯದೊಂದಿಗೆ ವರದಿಯನ್ನು ಒಂದು ವಾರದೊಳಗಾಗಿ ಸಲ್ಲಿಸಲು ನಿರ್ದೇಶಿಸಿರುವಂತೆ ಲಗ್ಗೆರೆ ಗ್ರಾಮದ ಸ.ನಂ. 119 ಮತ್ತು 120 ಮೂಲತಃ ಸರ್ಕಾರಿ ಹುಲ್ಲಬನ್ನಿ ಕಾವಲ್ ಜಮೀನಾಗಿರುತ್ತದೆ. ಸದರಿ ಜಮೀನಿನಲ್ಲಿ ಈ ಹಿಂದೆ 1078 ಹಕ್ಕುಪತ್ರಗಳನ್ನು ನೀಡಿರುವ ಫಲಾನುಭವಿಗಳಿಗೆ ಉಚಿತ ನಿವೇಶನಗಳಿಗೆ ಕಂದಾಯವನ್ನು ಕಟ್ಟಿಸಿಕೊಂಡು ಹಕ್ಕುಪತ್ರಗಳನ್ನು ಮನೆ ಮಾಲೀಕರಿಗೆ ಹಿಂದಿರುಗಿಸುವ ವಿಚಾರವಾಗಿ ಮೂಲ ದಾಖಲೆಗಳು ಹಾಗೂ ಇತರೆ ದಾಖಲೆಗಳನ್ನು ಪರಿಶೀಲನೆ ಮಾಡಿ ಜಿಲ್ಲಾಧಿಕಾರಿ ಕಛೇರಿಯಿಂದ 1078 ಫಲಾನುಭವಿಗಳ ನಿವೇಶನಗಳ ವಿಸ್ತೀರ್ಣ ತರಹ ಹಾಗೂ ಸ್ವಾಧೀನ ರೀತಿಯ ಕುರಿತು ಪಟ್ಟಿಯೊಂದಿಗೆ ನಿಗಧಿತ ನಮೂನೆಯಲ್ಲಿ ಮಾಹಿತಿ ತಯಾರಿಸಿ ಅರ್ಜಿ ಸಮಿತಿ ಸಂಖ್ಯೆ:122/15 ಕ್ಕೆ ವರದಿ ಸಲ್ಲಿಸಲಾಗಿರುತ್ತದೆ. ಪ್ರಸ್ತಾಪಿತ ಲಗ್ಗೆರೆ ಗ್ರಾಮದ ಸ.ನಂ.119 ಮತ್ತು 120 ಫಲಾನುಭವಿಗಳ ಹಕ್ಕುಪತ್ರಗಳನ್ನು ಹಿಂಪಡೆದು ಸಿ.ಒ.ಡಿ ತನಿಖೆಗೆ ಒಳಪಡಿಸಿದ್ದಾರೆಂದು ತಿಳಿಸಿದ್ದು, ಸದರಿ ಹಕ್ಕುಪತ್ರಗಳನ್ನು ಫಲಾನುಭವಿಗಳಿಗೆ ವಾಪಸ್ಸು ನೀಡಬೇಕೆಂದು ಕೋರಿರುವ ಲಗ್ಗೆರೆ ಗ್ರಾಮದ 119 ಮತ್ತು 120 ರಲ್ಲಿ ಈಗಾಗಲೇ 1078 ಹಕ್ಕುಪತ್ರ ನೀಡಿರುವ ಫಲಾನುಭವಿಗಳು ಅನುಭವದಲ್ಲಿರುವ ಬಗ್ಗೆ ಕಂದಾಯ ಮತ್ತು ನಗರಾಭಿವೃದ್ಧಿ ಇಲಾಖೆಯಿಂದ ಭೌತಿಕ ಪರಿಶೀಲನೆ ನಡೆಸಿ ವರದಿ ಸಲ್ಲಿಸಲಾಗಿರುತ್ತದೆಂದು ತಿಳಿಸಲಾಗಿರುತ್ತದೆ. ಪೋಲೀಸ್ ಮಹಾನಿರ್ದೇಶಕರ ಕಛೇರಿ ಸಿ.ಐ.ಡಿ ತರಬೇತಿ ವಿಶೇಷ ಘಟಕಗಳು ಮತ್ತು ಆರ್ಥಿಕ ಅಪರಾಧಗಳು ಕಾರ್ಲ್‌ಟನ್ ಭವನ, ಅರಮನೆ ರಸ್ತೆ, ಬೆಂಗಳೂರು-1 ರವರ ಪತ್ರಸಂಖ್ಯೆ:ನಂ.32/ ಅಪರಾಧ/ಎಫ್.ಎಸ್/ಸಿ.ಓ.ಡಿ/89/ದಿನಾಂಕ:27-05-2016 ರಂತೆ ಪೋಲೀಸ್ ಅಧೀಕ್ಷಕರು ಪತ್ರ ಸಲ್ಲಿಸುತ್ತಾ ಬೆಂಗಳೂರು ಉತ್ತರ ತಾಲ್ಲೂಕು ಯಶವಂತಪುರ01 ಹೋಬಳಿ, ಲಗ್ಗೆರೆ ಗ್ರಾಮದ ಸ.ನಂ. 119 ಮತ್ತು 120ಕ್ಕೆ ಸಂಭಂಧಿಸಿದಂತೆ ಯಾವುದೇ ತನಿಖೆ/ವಿಚಾರಣೆ

ಸಿ.ಐ.ಡಿ ಯಲ್ಲಿ ನಡೆದಿರುವಾಗಲೀ ಅಥವಾ ತನಿಖೆ ನಡೆಸಲು ಕಛೇರಿಗೆ ಯಾವುದೇ ದಾಖಲೆಗಳನ್ನು ಸಲ್ಲಿಸಿರುವುದಿಲ್ಲವಾಗಿ ಕಡತಗಳಲ್ಲಿ ಕಂಡುಬಂದಿರುವುದಿಲ್ಲವೆಂದು ತಿಳಿಸಿರುತ್ತಾರೆ ಅದರಂತೆ ಲಗ್ಗೆರೆ ಗ್ರಾಮದ ಸ.ನಂ. 119 ಮತ್ತು 120 ರ 1078 ಫಲಾನುಭವಿಗಳ ಪೈಕಿ 71 ಮೂಲ ಫಲಾನುಭವಿಗಳು ಹಾಗೂ ಹಕ್ಕುಪತ್ರ ಹೊಂದಿರುವ ಕುಟುಂಬಸ್ಥರು ವಾಸವಾಗಿದ್ದು, ಉಳಿದಂತೆ 1007 ಜನ ಫಲಾನುಭವಿಗಳು ಜಿ.ಪಿ.ಎ, ನೋಟರಿ, ಕ್ರಯಪತ್ರ, ದಾನಪತ್ರ ಹಾಗೂ ಇತರೆ ವಹಿವಾಟುಗಳಂತೆ ಸ್ವಾಧೀನತೆ ರೀತಿ ಪಡೆದುಕೊಂಡಿರುತ್ತಾರೆಂದು ಈ ಮೂಲಕ ತಿಳಿಸಿದೆ. ಹಾಗೂ ಈ ಹಿಂದೆ ತಯಾರಿಸಿದ್ದ ಪಟ್ಟಿಯನ್ನು ಮರು ದೃಢೀಕರಿಸಿ ಸಲ್ಲಿಸಲಾಗಿರುತ್ತದೆ. ಈ ಹಿಂದೆ ಲಗ್ಗೆರೆ ಗ್ರಾಮದ ಸ.ನಂ.119 ಮತ್ತು 120 ರಲ್ಲಿ ಪರಿಶೀಲನೆ ಮಾಡಿ ತಯಾರಿಸಿರುವ ಪಟ್ಟಿಯನ್ನು ದಿನಾಂಕ:29-11-2016 ರಲ್ಲಿ ಸಲ್ಲಿಸಿದ್ದು, ಸದರಿ ಪಟ್ಟಿಯ ಬಗ್ಗೆ ಅರ್ಜಿ ಸಮಿತಿಯಲ್ಲಿ ದಿನಾಂಕ: 09-11-2017ರಲ್ಲಿ ನಿರ್ಣಯ ಕೈಗೊಂಡಿದ್ದು, ನಿರ್ಣಯದ ಪ್ರತಿಯೊಂದಿಗೆ ಅರ್ಜಿ ಸಮಿತಿಯಲ್ಲಿ ನಿರ್ಣಯದಂತೆ ಸೂಕ್ತ ಕ್ರಮ ವಹಿಸುವ ಬಗ್ಗೆ ನಿರ್ದೇಶಿಸಿರುತ್ತಾರೆ ಎಂಬ ವಾಸ್ತವಾಂಶದ ವರದಿಯನ್ನು ಸಲ್ಲಿಸಿರುತ್ತಾರೆ.

ಸದರಿ ಪ್ರಕರಣದಲ್ಲಿ ಕಾನೂನು / ಆರ್ಥಿಕ ಇಲಾಖೆಯು ನೀಡಿರುವ ಅಭಿಪ್ರಾಯದಂತೆ, ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು ಉತ್ತರ ತಾಲ್ಲೂಕು, ಯಶವಂತಪುರ ಹೋಬಳಿ, ಲಗ್ಗೆರೆ ಗ್ರಾಮದ ಸ.ನಂ.119 ಹಾಗೂ ಸ.ನಂ.120ರಲ್ಲಿ ನಂಬರ್‌ನಲ್ಲಿ 20*30 ಅಡಿ ಅಳತೆಗೂ ಮೀರಿದ ವಿಸ್ತೀರ್ಣವಿರುವುದರಿಂದ, ಕೆಲವು ನಿವೇಶನಗಳಲ್ಲಿ ವಾಣಿಜ್ಯ ಕಟ್ಟಡಗಳನ್ನು ನಿರ್ಮಿಸಿರುವುದರಿಂದ, ಕೆಲವು ನಿವೇಶನಗಳಿಗೆ ಬಹುಮಹಡಿಯ ಕಟ್ಟಡಗಳನ್ನು ನಿರ್ಮಾಣ ಮಾಡಿರುವುದರಿಂದ ಕರ್ನಾಟಕ ಭೂ ಕಂದಾಯ ಅಧಿನಿಯಮ 1964 ಕಲಂ 94ಸಿಸಿ ರಡಿ ಮಂಜೂರಿ ಮಾಡಲು ಅವಕಾಶವಿರುವುದಿಲ್ಲವೆಂದು ನೀಡಿರುವ ಅಭಿಪ್ರಾಯದ ಹಿನ್ನಲೆಯಲ್ಲಿ, ಸದರಿ ಪ್ರಸ್ತಾವನೆಯನ್ನು ಹಾಲಿ ಇರುವ ನಿಯಮಗಳ ಪ್ರಕಾರ ಒಪ್ಪಲು ಸಾಧ್ಯವಾಗದೇ ಇರುವುದರಿಂದ ಪ್ರಸ್ತಾವನೆಯನ್ನು ಜಿಲ್ಲಾಧಿಕಾರಿಯವರಿಗೆ ಹಿಂದಿರುಗಿಸಲಾಗಿದೆ.

ಸಂಖ್ಯೆ: ಆರ್.ಡಿ. 172 ಎಲ್.ಜಿ.ಕ್ಯೂ 2025

**(ಕೃಷ್ಣ ಬೈರೇಗೌಡ)**
**ಕಂದಾಯ ಸಚಿವರು**